ಅ) ಹೌದು. ಒಟ್ಟಾರೆ 31 ಸಾರಿಗೆ ಸೇವೆಗಳು ನೆಲಮಂಗಲದ ಮುಖಾಂತರ ಹೋಗುತ್ತಿದ್ದು ಅವುಗಳಿಗೆ ಅಲ್ಲಿ ನಿಲುಗಡೆ ಒದಗಿಸಲಾಗಿದೆ. ಇವುಗಳ ಪೈಕಿ 21 ವೇಗಧೂತ, ಉಳಿದ 10 ಷಟಲ್ ಸಾರಿಗೆ ಸೇವೆಗಳಾಗಿವೆ. ಜನಸಂದಣಿ ಸಮಯದಲ್ಲಿ ಸಾರಿಗೆ ಅಗತ್ಯತೆ ಕಂಡುಬಂದಲ್ಲಿ ನೆಲಮಂಗಲದಿಂದ ತುಮಕೂರಿಗೆ ಒಂದು ಹೆಚ್ಚಿನ ಸಾರಿಗೆ ಸೇವೆ ಒದಗಿಸಲಾಗುವುದು.

ವಿಷಯ :– ರಾಜ್ಯದಲ್ಲಿ ಪ. ಜಾತಿ ಮತ್ತು ಪ. ಪಂಗಡದವರಿಂದ ಗೋಮಾಳ ಭೂಮಿ ಉಳುಮೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 725 (1085)

ಶ್ರೀ ಅಂಜನ ಮೂರ್ತಿ (ನೆಲಮಂಗಲ) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯಾದ್ಯಂತ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರು ಅನೇಕ ವರ್ಷಗಳಿಂದ ಗೋಮಾಳದ ಜಮೀನಿನಲ್ಲಿ ಉಳುಮೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಅಂತಹ ಜಮೀನುಗಳನ್ನು ಅರಣ್ಯ ಇಲಾಖೆಯವರು ಬಲತ್ಕಾರದಿಂದ ಆ ಬಡ ಜನರನ್ನು ಬೆದರಿಸಿ ಸಸಿ ನೆಡಲು ಪ್ರಯತ್ನಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :–

ಅ) ಹೌದು.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ವಿಷಯ :– ಗ್ರಾಮ ಲೆಕ್ಕಿಗರ ಕೊರತೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 726 (1086)

ಶ್ರೀ ಆಂಜನ್‌ಮೂರ್ತಿ (ನೆಲಮಂಗಲ) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯಾದ್ಯಂತ ಗ್ರಾಮಲೆಕ್ಕಿಗರ ಮತ್ತು ಕಂದಾಯ ಅಧಿಕಾರಿಗಳ ಕೊರತೆಯಿಂದ ರೈತಾಪಿ ವರ್ಗದವರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಇನ್ನೂ ಎಷ್ಟು ಜನ ಗ್ರಾಮಲೆಕ್ಕಿಗರ ಅವಶ್ಯಕತೆ ಇದೆ, ಹಾಗೂ ಇದರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಇ) ನೆಲಮಂಗಲ ಮತ ಕ್ಷೇತ್ರದಲ್ಲಿ ಗ್ರಾಮಲೆಕ್ಕಿಗರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :–

ಅ) ಬಂದಿದೆ. ರೈತಾಪಿ ವರ್ಗದವರ ತೊಂದರೆ ತಪ್ಪಿಸಲು ಪ್ರಭಾರೆ ಕೆಲಸ ನಿರ್ವಹಿಸಲು ಗ್ರಾಮ–ಲೆಕ್ಕಿಗರಿಗೆ ವಹಿಸಲಾಗಿದೆ. ಹಾಗೂ ಕೇಂದ್ರ ಸ್ಥಾನದಲ್ಲಿದ್ದು ಸಾರ್ವಜನಿಕರಿಗೆ ತೊಂದರೆ ಬರದಂತೆನೋಡಿ–ಕೊಳ್ಳುವಂತೆ ಎಲ್ಲಾ ಗ್ರಾಮ ಲೆಕ್ಕಿಗರುಗಳಿಗೆ ನಿರ್ದೇಶನ ನೀಡಿದೆ.

ಆ) ರಾಜ್ಯದಲ್ಲಿ ಒಟ್ಟು 1754 ಜನ ಗ್ರಾಮಲೆಕ್ಕಿಗರ ಹುದ್ದೆಗಳು ಖಾಲಿ ಇವೆ. ಆರ್ಥಿಕ ಮಿತವ್ಯಯದ ಕಾರಣ ಈ ಖಾಲಿ ಸ್ಥಾನಗಳನ್ನು ಸದ್ಯಕ್ಕೆ ತುಂಬಿರುವುದಿಲ್ಲ. ಆರ್ಥಿಕ ನಿರ್ಬಂಧ ಸಡಿಲಿಸಿದ ಕೂಡಲೇ ಖಾಲಿ ಸ್ಥಾನ ತುಂಬಲು ಕ್ರಮ ತೆಗೆದುಕೊಳ್ಳಲಾಗುವುದು.

ಇ) ಹೌದು. ನೆಲಮಂಗಲ ತಾಲ್ಲೂಕಿಗೆ ಒಟ್ಟು 53 ಗ್ರಾಮಲೆಕ್ಕಿಗರ ಹುದ್ದೆಗಳು ಮಂಜೂರಾಗಿದ್ದು ಅದರಲ್ಲಿ 9 ಗ್ರಾಮಲೆಕ್ಕಿಗರ ಹುದ್ದೆಗಳು ಖಾಲಿಯಿದೆ. ಆರ್ಥಿಕ ನಿರ್ಬಂಧ ಸಡಿಲಿಸಿದಾಗ ಖಾಲಿ ಹುದ್ದೆ ತುಂಬಲು ಕ್ರಮ ತೆಗೆದುಕೊಳ್ಳಲಾಗುವುದು.